ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾದಂ.ಕಾರಿಯವರ ನ್ಯಾಯಾಲಯ, ಕೊಡಗು, ಮಡಿಕೇರಿ

ಸಿ.ಸಿ.ನಂಃ 1096/2020

ಪಿಡಬ್ಲ್ಯುಃ - 8
ಸಿಡಬ್ಲ್ಯುಃ - 10

ದಿನಾಂಕಃ 20.10.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | - ರಾಕೇಶ್ |
| ತಂದೆಯ ಹೆಸರು | - ಈರಭದ್ರಯ್ಯ |
| ವಯಸ್ಸು | - 29 ವರ್ಷ |
| ವೃತ್ತಿ | - ಎಕ್ಸರೇ ಟೆಕ್ನಿಷನ್ |
| ವಾಸಸ್ಥಳ | - ಮಡಿಕೇರಿ |

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ

ನಾನು 2017 ರಿಂದ ಇಲ್ಲಿಯವರೆಗೆ ಮಡಿಕೇರಿ ಜಿಲ್ಲಾ ಆಸ್ಪತ್ರೆಯಲ್ಲಿ ಎಕ್ಸರೇ ಟೆಕ್ನಿಷನ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಚಾಸಾ-1 ಮತ್ತು 2 ರವರು ನಮ್ಮ ಆಸ್ಪತ್ರೆಗೆ ಬಂದಿದ್ದರು. ಆ ಸಮಯದಲ್ಲಿ ನಾನು ಅವರಿಗೆ ಎಕ್ಸರೇ ಮಾಡಿ ವರದಿ ನೀಡಿದ್ದೇನೆ. ಸಾಕ್ಷಿ ನಿಪಿ-6 ನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಸಿ ಎ ಪಿ ವಕೀಲರಿಂದ ಶ್ರೀ. ಕೆ. ಎಂ. ವಕೀಲರ ಪರವಾಗಿಃ

ನಾನು ಚಾಸಾ-1 ರವರ ಎಕ್ಸರೇ ತೆಗೆದ ದಿನ ಎಕ್ಸರೇ ತೆಗೆದ ಉಪಕರಣ ಸರಿ ಇತ್ತು ಎಂದು ವರದಿ ನೀಡಿರುವುದಿಲ್ಲ. ಎಕ್ಸರೇ ತೆಗೆಯಲು ನನಗೆ ತುರ್ತು ವಿಭಾಗದಿಂದ ಚಾಸಾ-12 ರವರು ಚಾಸಾ-1 ರವರನ್ನು ಕಳುಹಿಸಿಕೊಟ್ಟಿದ್ದರು. ಮೂಳೆ ಮುರಿತದ ಗಾಯಗಳಿಗೆ ಮಾತ್ರ ಎಕ್ಸರೇ ಮಾಡಲಾಗುತ್ತದೆ ಎಂದರೆ ಎಲ್ಲಾ ರೀತಿಯ ಮೂಳೆ ಮುರಿತಕ್ಕೂ ಎಕ್ಸರೇ ಮಾಡುತ್ತಾರೆ. ಚಾಸಾ-12 ರವರು ಮೂಳೆ ತಜ್ಞರು ಅಲ್ಲ ಎಂದರೆ ಸರಿ. ಕಾಲಿನಲ್ಲಿ ಮೂರು ವಿಭಾಗಗಳಾಗಿ ಮೂಳೆಗಳನ್ನು ವಿಂಗಡಿಸಲಾಗಿದೆ ಎಂದರೆ ಸರಿ. ಚಾಸಾ-1 ರವರಿಗೆ ಮೊಣಕಾಲಿನ ಕೆಳಗೆ ಎಷ್ಟು ಇಂಚಿನ ಮೂಳೆ ಮುರಿತ ಆಗಿತ್ತು ಎಂದು ನನಗೆ ಗೊತ್ತಿಲ್ಲ. ಚಾಸಾ-1 ರವರ ಮೀನ ಖಂಡದ ಎಷ್ಟು ಒಳಗೆ ಗಾಯ ಆಗಿತ್ತು ಎಂದು ಗೊತ್ತಿಲ್ಲ ಆದರೆ ಅದರಲ್ಲಿ ಗಾಯ ಆಗಿತ್ತು. ತುರ್ತು ವಿಭಾಗದಿಂದ ಬಂದ ಮೆಮೋವನ್ನು ನಾನು ಚಾಸಾ-1 ರವರಿಗೆ ಕೊಟ್ಟಿರುವುದಿಲ್ಲ. ನಿಪಿ-6 ನ್ನು

ನಾನು ತೆಗೆದಿಲ್ಲ ಹಾಗೂ ಅದನ್ನು ನಾನೇ ತೆಗೆದಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ.
ಸಹಿ/-

ಪ್ರಧಾನ ಜೆ ಎಂ ಎಫ್ ಸಿ, ಮಡಿಕೇರಿ.